ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯದಲ್ಲಿ ಹೊಸದಾಗಿ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಖಾಸಗೀಯವರು ಎಷ್ಟು ಜನರು ಅರ್ಜಿಯನ್ನು ಕೊಟ್ಟಿದ್ದಾರೆ ಮತ್ತು ರಾಜ್ಯ ಸರ್ಕಾರದವರು ಎಷ್ಟು ಅಂಥ ಅರ್ಜಿಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೀರಿ ; ಮತ್ತು ಕೇಂದ್ರ ಸರ್ಕಾರದವರು ನಿಮ್ಮ ಕೈಗಾರಿಕಾ ನೀತಿ ನಿರಿಯಲ್ಲವೆಂದು ಎಷ್ಟು ಲೆಟರ್ ಆಫ್ ಇಂಟೆಂಟನ್ನು ತಡೆಹಿಡಿದಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಹೊಸದಾಗಿ ಬಗ್ಗೆ ಲೆಟರ್ ಆಫ್ ಇಂಟೆಂಟ್ ಕೇಂದ್ರ ದವರು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರು ಅವರಿಗೆ ಶಿಫಾರಸು ಮಾಡಿತ್ತು. ಈಗ ನಾವು ಆವರನ್ನು ಹುಡುಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅವರು ಇನ್ನೂ ಕೈಗೆ ಸಿಕ್ಕಿಲ್ಲ. ಹಾಗೆಯೇ ಚಿತಾಪುರದಲ್ಲಿ ಒಂದು ಕಾರ್ಖಾನೆ ಮಾಡುವುದಕ್ಕೆ ಮೊನ್ನೆ ತಾನೇ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನಿಂದ ಕೇಂದ್ರ ಸರ್ಕಾರಕ್ಕೆ ರಿಪೋರ್ಟ್ ನಲ್ಲಿಸಿದ್ದೇವೆ. ಹಾಗೆಯೆ ತಾಳಿಕೋಟೆಯ ಮೂರು ಭಾಗಗಳಲ್ಲಿ ಸಿಮೆಂಟ್ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಂ. ನಜ್ಮನ್.—27-1-73 ರಂದು ಕೇಂದ್ರ ಸರ್ಕಾರದ ಮಂತ್ರಿಗಳಾದ ಹಾಗೂ ಪ್ಲಾನಿಂಗ್ ಕಮಿಷನ್ನಿನ ಶ್ರೀ ಧಾರ್ ಅವರು ಬಿಜಾಪುರಕ್ಕೆ ಬಂದಾಗ ತಾಳೀಕೋಟೆಯಲ್ಲಿ ಒಂದು ಸಿಮೆಂಟ್ ಕಂಪೆನಿಯನ್ನು ಸ್ಥಾಪನೆ ಮಾಡುವ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಫೆಬ್ರುವರಿ 4 ಅಥವಾ 5 ರೊಳಗೆ ಕಳುಹಿಸಿಕೊಡುತ್ತೇವೆಂದು ಹೇಳಿ, ಆ ರೀತಿಯಾಗಿ ಒಂದು ಕಮಿಟಿಯನ್ನು ಅಲ್ಲಿಗೆ ಕಳುಹಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಆದು ನನ್ನ ಗಮನಕ್ಕೆ ಬಂದಿಲ್ಲ.

Developmental works in Ex-Inam Villages

79. Sri H. B. LAKSHMANA (Bharmasagara).—

Will the Minister for Community Development and Social Welfare be pleased to state.—

(*a*) whether any developmental works have been taken up in the ex-Inam Villages of the State from the date of taking over ;

(*b*) if so, the developmental works taken up and proposed to be taken up in such of the villages of Chitradurga District ?

Sri M. MALLIKARJUNASWAMY (Minister for Community Development and Social Welfare).—

(*a*) Suitable developmental works have been taken up.

(*b*) The works taken up and proposed to be taken up are indicated in the Statement placed on the Table of the House.*

ಶ್ರೀ ಎಚ್. ಬಿ. ಲಕ್ಷ್ಮಣ.— ಆ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ ಅದರ ಬಗ್ಗೆ ಈ ಸಭೆಯಲ್ಲಿ ಎಷರಗಳನ್ನು ಓದುವುದಕ್ಕಾಗುತ್ತದೆಯೇ ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಒಂದು ಘಂಟೆ ಪೂರ್ತಿ ತೆಗೆದುಕೊಂಡರೂ ಅದನ್ನು ಓದಿ ಮುಗಿಸುವುದಕ್ಕಾಗುವುದಿಲ್ಲ. ಸ್ಟೇಟುಗಳನ್ನು ಹಂಚಿದ್ದೇವೆಂದು ಸಭೆಯ ಮುಂದೆ ಕೊಟ್ಟಿರುವ ತಃಖ್ತೆಯಲ್ಲಿ ಹೇಳಿದೆ.

---

* Copy placed in the Mysore Legislature Library *vide* No. 1, dated 20th February 1973.

ಶ್ರೀ ಎಚ್. ಬಿ. ಲಕ್ಷ್ಮಣ.—ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡತಕ್ಕವರು ಸುಮಾರು ಒಂದೂವರೆ ಮೈಲಿ ದೂರದಲ್ಲಿ ಹೋಗಿ ಮನೆ ಕಟ್ಟಿಕೊಂಡು ವಾಸಮಾಡಬೇಕೆಂದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮನೆಗಳನ್ನು ಕಟ್ಟುವುದಕ್ಕೆ. ಜಾಗಬೇಕು ಎಂದರೆ ಅಷ್ಟು ದೂರ ಹೋಗಬೇಕಾಗುತ್ತದೆ.

ಶ್ರೀ ಎಚ್. ಬಿ. ಲಕ್ಷ್ಮಣ.—ಗ್ರಾಮಗಳ ಸುತ್ತಮುತ್ತಲಿರುವ ಜಮೀನುಗಳನ್ನು ಅಕ್ವೈರ್ ಮಾಡಿ ಅವರಿಗೆ ಹಂಚುವುದಕ್ಕೆ ಆಗುತ್ತಿರಲಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಈಗಾಗಲೇ ಆಲ್ಲರತಕ್ಕ ಸರ್ಕಾರದ ಜಮೀನುಗಳನ್ನು ತೆಗೆದುಕೊಂಡು ಹಂಚುತ್ತಿದ್ದೇವೆ. ಸಾಲದೆ ಬಂದಾಗ ಅಲ್ಲರತಕ್ಕ ಕೆಲವು ಸರ್ವೆ ನಂಬರುಗಳನ್ನು ಅಕ್ವೈರುಮಾಡಿ ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ಜಾಗ ಕೊಡಬೇಕೆಂಬುದೇ ಸರ್ಕಾರದ ಆಶಯ.

ಶ್ರೀ ಎಚ್. ಬಿ. ಲಕ್ಷ್ಮಣ.—ಅವರವರ ಗ್ರಾಮಗಳಿಂದ ಒಂದೂವರೆ ಮೈಲಿ ದೂರ ಹೋಗಿ ಅಲ್ಲರತಕ್ಕ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮೊದಲೇ ಅವರಿಗೆ ಕುಡಿಯುವ ನೀರಿನ ಸೌಕರ್ಯಗಳನ್ನು ಕೊಡಲೇ ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರು ಅಲ್ಲಗೆ ಹೋದಮೇಲೆ ಅವರಿಗೆ ಕುಡಿಯುವ ನೀರಿನ ಸೌಕರ್ಯಗಳನ್ನು ಮಾಡಿಕೊಡುತ್ತೇವೆ.

ಶ್ರೀ ಎಚ್. ಬಿ. ಲಕ್ಷ್ಮಣ.—ಅಲ್ಲಿಗೆ ಹೋಗಿ ಇರುವುದಕ್ಕೆ ಮತ್ತು ಮನೆ ಕಟ್ಟಿಕೊಳ್ಳುವುದಕ್ಕೆ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರು ಅಲ್ಲಿಗೆ ಹೋಗದೆ ಸರ್ಕಾರ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರು ಅಲ್ಲಿಗೆ ಹೋಗುತ್ತಾರೆಂಬುದು ದೃಢವಾದರೆ ಸರ್ಕಾರದವರು ಸಾರ್ವಜನಿಕ ಬೊಕ್ಕಸದಿಂದ ಹಣವನ್ನು ಖರ್ಚುಮಾಡಿ ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸಿಕೊಡುತ್ತಾರೆ.

Sri N. B. SIRDESAI.—May I know whether the Government is aware of the fact that as compared to the number of developmental works taken up in other villages, the number of works in Inam villages is too poor and that even though 22 years have passed since paragana lands are abolished, the cultivators of such lands are not availing of the Government benefits because of the stringent policy of the Government ?

Sri M. MALLIAKARJUNASWAMY.—It is not correct to say so. It may be the opinion of the hon. Member.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಸಾರ್ವಜನಿಕ ಬೊಕ್ಕಸವನ್ನು ನಾವು ಖರ್ಚುಮಾಡುವುದಕ್ಕೆ ತಯಾರಿಲ್ಲವೆಂದು ಹೇಳಿದರು. ಸಾಮಾನ್ಯವಾಗಿ ಒಂದು ಜಾಗದಲ್ಲಿ ಮನೆ ಕಟ್ಟಬೇಕಾದರೆ ಅದು ಊರಿಗೆ ಒಂದೂವರೆ ಮೈಲಿ ದೂರದಲ್ಲಿದೆಯೆಂದರೆ ಹೇಗೆ ? ಪೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ಒಂದು ಪ್ರತ್ಯೇಕ ಕಾಲೋನಿ ಮಾಡಿ ಇರಿಸಬಾರದು. ಅವರನ್ನೂ ಸಹ ಎಲ್ಲರ ಜೊತೆಯಲ್ಲಿ ಒಂದೇ ಕಡೆ ಇರಬೇಕೆಂದು ಈ ಸರ್ಕಾರ ಹೇಳುತ್ತಿರುವಾಗ ಮತ್ತು ಸಾರ್ವಜನಿಕ ಸ್ಕೂಲು, ಬಾವಿಗಳನ್ನು ತೆಗೆದು ಅಸ್ಪೃಶ್ಯತಾ ನಿವಾರಣೆ ಹೋಗತಾಡಿಸಬೇಕೆಂದು ಅವರನ್ನೂ ಸಹ ಎಲ್ಲರ ಜೊತೆಯಲ್ಲಿ ಒಟ್ಟುಗೂಡಿ ಸೇರಿ ಬೆಳೆಸಬೇಕೆಂದು ಹೇಳುತ್ತಿದ್ದೀರಿ. ಅಂತಹ ಒಂದು ತತ್ವವನ್ನು ಈಗ ಅನುಸರಿಸದೆ ಆ ಭಾಗದಲ್ಲಿ ಒಳ್ಳೆಯ ಸ್ವೆಟುಗಳಿದ್ದರೂ ಕಟ್ಟದೆ ಒಂದೂವರೆ ಮೈಲಿ ದೂರ ಹೋಗಿ ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸ್ವೆಟುಗಳನ್ನು ಮಾಡುವ ಪ್ರತ್ಯೇಕ ಮನೋಭಾವವನ್ನು ಕೂಡಲೇ ರದ್ದುಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರು ಈಗ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆ ರೀತಿ ಆಗಿದ್ದರೆ ಅದನ್ನು ಸೂಕ್ತವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಜಿ. ಹಾಲಪ್ಪ.—ಸರ್ಕಾರಕ್ಕೆ ಅವರು ಅಲ್ಲಿಗೆ ಹೋಗುತ್ತಾರೆಂಬ ನಂಬಿಕೆ ಬರುವಂತೆ ಮಾಡಬೇಕಾದರೆ, ಅಲ್ಲಿನ ಜನರು ಏನು ಮಾಡಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರು ಸ್ವೆಟುಗಳನ್ನು ಕೇಳಿ ಸಾಗುವಳಿ ಚೀಟಿಯನ್ನು ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಿ ಸ್ವೆಟುಗಳನ್ನು ಹಂಚಿದಾಗ ಅವರು ಅಲ್ಲಿಗೆ ಹೋಗುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ಸರ್ಕಾರಕ್ಕೆ ವೇದ್ಯವಾಗುತ್ತದೆ. ಅದಾದ ಮೇಲೆ ನಾವು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಬಿ. ಲಕ್ಷ್ಮಣ.—ಅಲ್ಲಿಗೆ ಕೂಡಲೇ ಹೋಗಿ ಮನೆಗಳನ್ನು ಕಟ್ಟುವುದಕ್ಕೆ ಯಾರೂ ತಯಾರಿಲ್ಲ. ಆದ್ದರಿಂದ ಈ ಭಾಗದಲ್ಲಿಯೇ ನರ್ವೇ ನಂಬರ್ ಬೇಕಾದಷ್ಟಿದೆ. ಅದನ್ನಾದರೂ ಈಗ ಅಕ್ಯೂಸಿಷನ್ ಮಾಡಿ ಅವರಿಗೆ ಕೊಡುವುದು ಒಳ್ಳೆಯದಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರು ಅಲ್ಲಿ ಮನೆ ಕಟ್ಟುವುದಕ್ಕೆ ಹೋಗದಿದ್ದರೆ ಅಂತಹವರನ್ನು ನಾವು ಬಲಾತ್ಕಾರ ಮಾಡುವುದಿಲ್ಲ. ಅಂತಹ ನಂದರ್ಭದಲ್ಲಿ ಗ್ರಾಮದ ಪಕ್ಕದಲ್ಲಿರುವ ನರ್ವೆ ಪಂಬರುಗಳನ್ನು ಅಕ್ವೈರು ಮಾಡಿಕೊಂಡು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಚ್. ಬಿ. ಲಕ್ಷ್ಮಣ.—ಗ್ರಾಮದ ಪಕ್ಕದಲ್ಲಿಯೇ ಒಂದು ನರ್ವೆ ನಂಬರ್ ಇದೆ. ಅಲ್ಲಿ ಅವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಆಗಬಹುದು.

Auction of Cart Roads at Angol

110. **Sri B. B. SAYANAK** (Belgaum):—

Will the Minister for Community Development and social Welfare be pleased to state :—

(*a*) whether it is a fact that there are cart-roads at Angol in Agricultural lands in Belgaum Taluk in Belgaum District ;

(*b*) whether it is a fact that those cart-roads were auctioned by the then Village Panchayat of Angol ;

(*c*) whether after the merger of this Village Panchayat in Belgaum City Municipality those cart-road were auctioned by the villagers of Angol ;

(*d*) the person or agency that authorised the right of auctioning of those cart-roads to the villagers ;

(*e*) since when those-cart roads were auctioned by the villagers and the auctioned amount realised up-to-now ?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) Yes.

(*c*) The cart-roads are being auctioned by a village Agricultural Development Committee.

(*d*) Town Panchayat Committee, Angol.